**<u>ದಿನಾಂಕಃ 07.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ **BVJ** ವಕೀ**ಲರಿಂದಃ**</u>

ದಾವೆಯ ಪ್ರತಿವಾದಿ ನನ್ನ ವಿರುದ್ಧ ಮತ್ತೊಂದು ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನ ಯಾವ ಸರ್ವೆ ಸಂಖ್ಯೆ ಗೆ ಮತ್ತು ಯಾವ ಪರಿಹಾರ ಕೋರಿ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ನ್ಯಾಯಾಲಯ ದ ಮುಂದೆ ಸಾಕ್ಷಿ ನೀಡಿರುತ್ತೇನೆ ಎಂದರೆ ಸರಿ. ಸದರಿ ದಾವೆ ಈಗಲೂ ಚಾಲ್ತಿಯಲ್ಲಿದೆ. ಸದರಿ ದಾವೆಯಲ್ಲಿ ಸರ್ವೆ ಸಂಖ್ಯೆ 30/322 ಕ್ಕೆ ತೊಂದರೆ ನೀಡುತ್ತಿದ್ದೇವೆ ಎಂದು ಅದಾ ಸಂಃ 30/2015 ರಂತೆ ದಾವೆಯಲ್ಲಿ ಪರಿಹಾರ ಕೋರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಹೂಡಿದ ನಂತರ ನಾನು ಈ ದಾವೆಯನ್ನ ಅವರ ವಿರುದ್ಧ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೂಡಿದ ನಂತರ ಪ್ರತಿವಾದಿ ನನ್ನ ವಿರುದ್ಧ ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ.

ವಾದಿ ರಾಮನಾಯಕ ರವರಿಗೆ ದಮ್ಮು ಕಾಯಿಲೆ ಇರುವುದರಿಂದ ಅವರು ನನ್ನನ್ನು ಈ ದಾವೆ ನಡೆಸಲು ವಿಶೇಷ ಮೊಕ್ತಾರ್ ನಾಮೆ ನೀಡಿರುತ್ತಾರೆ. ಈ ಖಾಯಿಲೆಗೆ ಸಂಬಂಧಿಸಿದ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾದಿಯು ಆರೋಗ್ಯದಿಂದಿದ್ದರೂ ಸಹಾ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವ ಸ್ವತ್ತು ಸರ್ಕಾರದಿಂದ 1996 ನೇ ಸಾಲಿನಲ್ಲಿ ಮಂಜೂರಾದ ಸ್ವತ್ತಾಗಿರುತ್ತದೆ. ಈ ಬಗ್ಗೆ ಸಾಗುವಳಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಗುವಳಿ ಪತ್ರದಲ್ಲಿ ದಾವ ಸ್ವತ್ತಿಗೆ ಸಂಬಂಧಿಸಿದಂತೆ ಚಕ್ಕುಬಂದಿ ನಮೂದಿಸಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಿದ್ದೇನೆ. ಸಾಗುವಳಿ ಪತ್ರದ ಜೊತೆಗೆ ನೀಡಿದ ಕಂದಾಯ ನಕ್ಷೆಯನ್ನು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಸರ್ವೆ ಕಾರ್ಯವನ್ನು ಮಾಡಿಸಿಲ್ಲ. ಪ್ರಸ್ತುತ ದಾವೆಯನ್ನು ಒಂದು ಜಮೀನು ಹಾಗೂ ಒಂದು ಮನೆಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ಸದರಿ ಮನೆಯನ್ನು ಪಂಚಾಯಿತಿಯಿಂದ ಹಕ್ಕುಪತ್ರದ ಮೂಲಕ ಪಡೆದುಕೊಂಡಿರುತ್ತೇವೆ. ಸದರಿ ಹಕ್ಕುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ನಮಗೆ ತಿಳಿದಿರುವುದಿಲ್ಲ. ಯಾವ ವರ್ಷದಲ್ಲಿ ಹಕ್ಕುಪತ್ರವನ್ನ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮನೆಯ ವಿಸ್ತೀರ್ಣವನ್ನು ಹಾಗೂ ಚಕ್ಕುಬಂದಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಮನೆಯು ಪೂಪಃ 30 ಅಡಿಗಳು ಉದಃ 25 ಅಡಿಗಳು ಇರುತ್ತವೆ. ಈ ವಿಸ್ತೀರ್ಣವು ಹಾಗೂ ಚಕ್ಕುಬಂದಿ ಹಕ್ಕುಪತ್ರದಲ್ಲಿ ನಮೂದಾಗಿರುತ್ತದೋ ಇಲ್ಲವೋ ಗೊತ್ತಿಲ್ಲ.

ದಾವಾ ಐಟಂ 1 ರ ಸ್ವತ್ತು ಸರ್ವೆ ಸಂಖ್ಯೆ 30/91 ಕ್ಕೆ ಸಂಬಂಧಿಸಿದಂತೆ ಮಂಜೂರಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಸಾಗುವಳಿ ಪತ್ರ ಇದೆ. ದಾವ ಸ್ವತ್ತಿಗೂ ಹಾಗೂ ವಾದಿ ರಾಮನಾಯಕ ರವರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹಾಗೂ ವಾದಿ ರಾಮನಾಯಕ ರವರು ಹಾಗೂ ನಾನು ದಾವ ಸ್ವತ್ತಿನ ಸ್ವಾದೀನದಲ್ಲಿ ಯಾವ ಕಾಲಕ್ಕೂ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 2 ಮನೆ ಸ್ವತ್ತು ನಮಗೆ ಯಾವ ಪಂಚಾಯಿತಿಯಿಂದ ಹಕ್ಕುಪತ್ರದ ಮೂಲಕ ಮಂಜೂರಾಗಿಲ್ಲ ಹಾಗೂ ಸದರಿ ಮನೆ ಸ್ವಾದೀನದಲ್ಲಿ ವಾದಿ ಎಂದಿಗೂ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ದೊಡ್ಡಪ್ಪ ರವರಿಗೆ ಸೇರಿದ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಯನ್ನು ಹಾಗೂ ಸುಳ್ಳು ಚಕ್ಕುಬಂದಿಯನ್ನು ದಾವ ಸ್ವತ್ತಿಗೆ ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**

**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.**
**ಪಿರಿಯಾಪಟ್ಟಣ.**